ಶ್ರೀ ಧರ್ಮಸಿಂಗ್.—ಈ ಕಾವೇರಿ ಸೀನೇ ಹಂತಕ್ಕೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಯೋಜನಾ ವೆಚ್ಚ ಇದೆ ಆದರೆ ಇದುವರೆಗೂ ಅವರು ಕೇವಲ ೩ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇಷ್ಟು ಕಡಿಮೆ ಹಣ ಖರ್ಚು ಮಾಡುತ್ತಿರುವುದರಿಂದ ಇವರು ಹೇಗೆ ಯೋಜನೆಯನ್ನು ಪೂರ್ಣಗೊಳಿಸುತ್ತಾರೆ? ನಮ್ಮ ಕಾಲದಲ್ಲಿ ಹುಬ್ಬಳ್ಳಿ ಧಾರವಾಡ ನಗರಗಳಿಗೆ ನೀರು ಸರಬರಾಜು ಮಾಡುವುದಕ್ಕೆ ಎರಡು ವರ್ಷಗಳಲ್ಲಿ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ನಮ್ಮ ಕಾಲದಲ್ಲಿ ನೀವು ಯಾವ ರೀತಿ ಆಗ್ರಹ ಪಡಿಸುತ್ತಿದ್ದೀರಿ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ತಾವು ಕೆಲಸ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಲಿಖಿತ ಉತ್ತರದಲ್ಲಿ ಎಲ್ಲವನ್ನೂ ತಿಳಿಸಿದ್ದೇನೆ. ತಾವು ಅದನ್ನು ಓದದೇ ಪ್ರಾತನಾಡುತ್ತಿದ್ದೀರಿ.

ಶ್ರೀ ಧರ್ಮಸಿಂಗ್.—ನಾನು ಎಲ್ಲಾ ಓದಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕಾವೇರಿಯ ಸೀನೇ ಹಂತಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಸರ್ಕಾರದ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಅರಿತೇ ನಾವು ಕೆಲಸವನ್ನು ಮಾಡುತ್ತಿದ್ದೇವೆ. ನಾವು ೨೧೦ ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ ಇನ್ನು ಉಳಿದ ಹಣವನ್ನು ಕೇಂದ್ರ ಸರ್ಕಾರವು ಕೊಡಬೇಕೆಂದು ಕೇಳಿದ್ದೆವು. ಕೇಂದ್ರ ಸರ್ಕಾರದವರು ೨೧೦ ಕೋಟಿ ರೂಪಾಯಿಗಳನ್ನು ಯಾವ ರೀತಿ ಒದಗಿಸಿಕೊಡುತ್ತೀರೆಂದು ಕೇಳಿದರು. ಸೀನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ೨೧೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಡುತ್ತೇವೆ. ಆದರಲ್ಲಿ.....ಎಲ್. ಐ. ಸಿ. ಯಿಂದ ೫೦ ಕೋಟಿ ರೂಪಾಯಿಗಳನ್ನು ಔಟ್‌ಸೈಡ್ ದಿ ಪ್ಲಾನ್ ನಿಂದ ಕೊಟ್ಟಿದ್ದೇವೆ. ಅವರ ಕಾಲದಲ್ಲಿ ಆಗಲಿಲ್ಲ ಈ ಕೆಲಸ.

ಶ್ರೀ ಧರ್ಮಸಿಂಗ್.—ಮೂರನೇ ಹಂತವನ್ನು ನಾವು ಮಾಡಿದುದ್ದು, ನಮ್ಮ ಕಾಲದಲ್ಲಿ ಮಾಡಿದುದ್ದು. ಆ ಮೂರನೇ ಹಂತದ ಯೋಜನೆಗೆ ನೀವು ನಾಲ್ಕು ವರ್ಷಗಳಲ್ಲಿ ಏನು ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಧರ್ಮಸಿಂಗ್‌ರವರು ಈ ರಾಜ್ಯದ ಎಲ್ಲಾ ಭಾರವನ್ನು ಹೊತ್ತಿರತಕ್ಕಂತಹ ಮಹಾನುಭಾವರು. ಇಲ್ಲಿನ ಎಲ್ಲಾ ಕೀರ್ತಿಗಳು ಅವರಿಗೇ ಬರಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಈಗ ನಮಗೆ ಬಂದಿರತಕ್ಕಂತಹ ನೀರಿನ ಸಮಯವನ್ನು, ಆದರ ಭಾರವನ್ನು ನಾವು ಹೊತ್ತು, ಬೆಂಗಳೂರು ನಗರಕ್ಕೆ ನೀರನ್ನು ಒದಗಿಸುವ ಎಲ್ಲಾ ಕ್ರಮವನ್ನು ಸೂಕ್ತ ಕಾಲದಲ್ಲಿ ಮಾಡುತ್ತೇವೆ. ಅದಕ್ಕೆ ಬೇಕಾದ ಹಣವನ್ನು ಒದಗಿಸುತ್ತೇವೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ.....

ಅಧ್ಯಕ್ಷರು.—ಈಗಾಗಲೇ ಮೂರು ಸಪ್ಲಿಮೆಂಟರಿ ಆಗಿವೆ, ದಯವಿಟ್ಟು ತಾವು ಕುಳಿತುಕೊಳ್ಳಿ. ಬೇಕಾದರೆ ಅರ್ಧ ಗಂಟೆಯ ಕಾಲದ ಚರ್ಚೆಗೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ಧರ್ಮಸಿಂಗ್.—ಅರ್ಧ ಗಂಟೆಯ ಕಾಲಾವಧಿಯ ಚರ್ಚೆಗೆ ಅವಕಾಶವನ್ನು ಕಲ್ಪಿಸಿಕೊಡಿ.

ಕೆ. ಜಿ. ಎಫ್. ನಲ್ಲಿ ಕುಡಿಯುವ ನೀರಿನ ಸಮಸ್ಯೆ

೫೧ (೨೫೯) ಶ್ರೀ ಬಿ. ಎಸ್. ಮಾಣಿ (ಕೆ.ಜಿ. ಎಫ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ. ಜಿ. ಎಫ್.ನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ತೆಗೆದುಕೊಳ್ಳಲಾದ ತಾತ್ಕಾಲಿಕ ಕ್ರಮಗಳು ಅಗತ್ಯವನ್ನು ಪೂರೈಸಲು ಸಾಕಷ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ : —

ಆ) ಈ ಸಂಬಂಧವಾಗಿ ಶಾಶ್ವತ ಪರಿಹಾರವನ್ನು ಒದಗಿಸಲು ಸರ್ಕಾರವು ಉದ್ದೇಶಿಸಿದೆಯೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಹೌದು.

SRI T. S. MANI.—If the Hon'ble Minister says 'yes' to my question, I would like to ask him what is that permanent solution? Can he explain?

SRI A. LAKSHMISAGAR.—Water supply position is not satisfactory in several parts of our State including KGF. The main source-of supply has been from B thamangala tank. We did not have sufficient rains, there were some scanty rains. In the meanwhile, We have taken up several measures to meet the demands of the people, at least to the minimum possible extent. Improvment to water supply system at Robersonpet Kolar at an estimated cost of Rs. 18½ lakhs has also been considered. Water supply to KGF (BEML) has been improved by sinking and harnessing borewells in Gosinakere tank area, and sinking and harnessing borewells has been undertaken at Swarnakuppa and Oorgam areas under scarcity relief work at a cost of Rs. 6 lakhs. All these measures have been taken. If the rain God do not help us, there will be difficulty for us even all these schemes are implemented. I hope and trust that this year we will have sufficient rains and my friend Sri Mani will not have any difficulty.

SRI T. S. MANI.—KGF is a growing city and there is a proposal to upgrade it to the City Corporation. Why th Government can't supply Cauvery water to KGF? Is there any proposal to that effect?

SRI A. LAKSHMISAGAR.—Once upon a time that idea was there. But, i will be a scheme costing several crores of rupees, ie is stil in the stage of hibernation.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ—೫೨ (೧೬೯)ನ್ನು ಮುಂದೂಡಲಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳಿಂದ ನನ್ನ ಪ್ರಶ್ನೆಗಳನ್ನು ಮುಂದೂಡಲಾಗಿದೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ನನ್ನ ಪ್ರಶ್ನೆಗೆ ಉತ್ತರವು ಮುಂದಿನ ಅಧಿವೇಶನಕ್ಕೆ ಆದರೂ ಬರುತ್ತದೆಯೇ?

ಅಧ್ಯಕ್ಷರು.—ತಮಗೆ ಉತ್ತರವನ್ನು ಒದಗಿಸಿಕೊಡುತ್ತೇನೆ. ಈಗ ಮಾನ್ಯ ಯಡಿಯೂರಪ್ಪ ನವರು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರು ಸದಸ್ಯರ ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳುತ್ತಿದ್ದೀರಿ, ಆ ಪ್ರಶ್ನೆಗಳು ಏತಕ್ಕೆ ಮುಂದಕ್ಕೆ ಹೋಗುತ್ತವೆ ಎಂಬುದಕ್ಕೆ ನಮಗೆ ಕಾರಣವನ್ನು ಹೇಳಬೇಕು, ಅದು ನಮಗೆ ಗೊತ್ತಾಗಬೇಕು. ಜೊತೆಗೆ ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಸಂಬಂಧಪಟ್ಟ ಮುಂತ್ರಿಯವರಿಂದ ಉತ್ತರವು ಸದನದಲ್ಲಿಯೇ ಬರಬೇಕಾಗುತ್ತದೆ. ಸದನದಲ್ಲಿ ಉತ್ತರವನ್ನು ಮಂತ್ರಿಯವರು ಕೊಡುವ ಹೊತ್ತಿನಲ್ಲಿ ಸದಸ್ಯರುಗಳು ಆ ಕರಿತು ಉಪ-ಪ್ರಶ್ನೆಗಳನ್ನು ಕೇಳುವುದಕ್ಕೆ ಸಾಧ್ಯವಾಗುತ್ತದೆ. ಅಧಿವೆ ಶನ ಮುಗಿದ ಮೇಲೆ, ಅಥವಾ ಸದಸ್ಯರುಗಳಿಗೆ ನೇರವಾಗಿ ಉತ್ತರವನ್ನು ಕಳುಹಿಸಿದಲ್ಲಿ ಸದಸ್ಯರು ಉಪ-ಪ್ರಶ್ನೆಯನ್ನು ಕೇಳುವ ಹಕ್ಕು ಇಲ್ಲದಾಗುತ್ತದೆ. ಆದುದರಿಂದ ಈ ಕುರಿತಾಗಿ ಮಾನ್ಯ ಅಧ್ಯಕ್ಷರು ಸದಸ್ಯರುಗಳ ಹಕ್ಕನ್ನು ತಾವು ರಕ್ಷಣೆ ಮಾಡ ಬೇಕಾಗುತ್ತದೆ.